ಅನ್ನುವಂತೆ ಸಾಗಿತ್ತು.

ಎಂಟು ದಿನಕ್ಕೊಮ್ಮೆ ಸೈನಿಕ ಕೋರ್ಟಿನ ಕಟ್ಟಳೆಗಳು, ತರಹೇವಾರಿ ಪ್ರಶ್ನೆಗಳು ನಡೆದೇ ಇದ್ದವು. ಅವರ ಪ್ರಶ್ನೆಗಳು ನನಗೆ ಅಸಂಬದ್ಧವೋ ಅವರಿಗೆ ಸಂಬದ್ಧವೋ ನನಗೂ ಅರ್ಥವಾಗುತ್ತಿದ್ದಿಲ್ಲ. ಅಂದು ಮಂಜು ಮುಸುಕಿ ಶ್ರೀನಗರವೆಲ್ಲ ಮಂಜಿನಿಂದಾವೃತ್ತವಾಗಿತ್ತು. ನ್ಯಾಯಾಧೀಶರು ಬಹಳ ಮರ್ಯಾದೆಯಿಂದಲೇ ಮಾತಾಡಿಸಿದರು. ಅವರ ಧ್ವನಿ ಪ್ರೀತಿಪೂರ್ವಕವಾಗಿತ್ತು. ಕೆಲ ಎಚ್ಚರಿಕೆಯನ್ನು ಕೊಟ್ಟರು. ಬೇರೆ ದೇಶದ ಸೈನಿಕನ ಜೊತೆ ನನ್ನ ವರ್ತನೆ ಹೇಗೆ ಇರಬೇಕೆಂದು ಸುಮಾರು ಗಂಟೆಗಳ ಕಾಲ ಹೇಳಿದರು. ನನ್ನ ಬಡತನದ ಬಗ್ಗೆ ಹೇಳಿದರು. ಈ ಬಡತನದಲ್ಲಿ ತಾಯಿಯ ಜವಾಬ್ದಾರಿಯನ್ನು ಹೇಗೆ ನಿಭಾಯಿಸಬೇಕೆಂದು ಮಾತಿನಿಂದಲೇ ಜಂಕಿಸಿದರು. ಇದಕ್ಕೆ ಪೂರಕವಾಗಿ ಚಾಚಾನ ಜೊತೆ ನಮ್ಮ ಕೆಲ ಸೈನಿಕರು ಕೆಲಸ ಮಾಡಿದ್ದರಲ್ಲ ವಾಘಾ ಗಡಿಯಲ್ಲಿ ಅವರಲ್ಲಿ ಚಾಚಾ ಉಗ್ರಗಾಮಿಯೋ, ಸೈನಿಕನೋ, ಒಳ್ಳೆಯವನೋ, ಕೆಟ್ಟವನೋ ಎನ್ನುವ ಬಗ್ಗೆ ಅಭಿಪ್ರಾಯ ಸಂಗ್ರಹಿಸಲಾಗಿತ್ತು. ಅದರ ಪ್ರಕಾರ ಘನ ನ್ಯಾಯಾಧೀಶರು ಒಂದು ಲಿಖಿತ ಹಿಮ್ಮಾಯಿತಿಯನ್ನು ಓದಿದರು. 'ಪಾಕಿಸ್ತಾನಕ್ಕೆ ಸೇರಿದ ಬಂದೇನವಾಜ ನಿಷ್ಟಿ' ಎನ್ನುವ ಈತನಿಗೆ ಏನನ್ನಬೇಕೋ ತಿಳಿಯದು. ಬಹುಶಃ ಸಂತ, ಮಹಾತ್ಮ ಎನ್ನುವ ಶಬ್ದಗಳು ಸೂಕ್ತ ಎನ್ನಿಸುತ್ತವೆ. ಅಂಥಹ ಅದಮ್ಯ ಮಾನವೀಯ ಕಾಳಜಿ ಇರುವ ಶಾಂತಮೂರ್ತಿ ಆತ. ಸಾಕಷ್ಟು ಕಾಲ ಆತನ ಜೊತೆ ಬಾರ್ಡರ್‌ನಲ್ಲಿ ಕೆಲಸ ಮಾಡಿದ್ದೇನೆ. ಇನ್ನೂ ಇವನ ಬಗ್ಗೆ ಏನು ಹೇಳಲಿ? ಪ್ರೀತಿಯ ಸಂಕೇತವಾದ ಅದಮ್ಯ ಜೀವ ಆತ. ವಯಸ್ಸಿನಲ್ಲಿ ನನಗಿಂತಲೂ ದೊಡ್ಡವನಾದರೂ 'ಸಾಬ್ ಜಿ' ಎನ್ನದೇ ಮಾತಾಡುತ್ತಿರಲಿಲ್ಲ. ಮನೆಯಿಂದ ಸಿಹಿಯನ್ನು ನಮಗಾಗಿಯೇ ತರುತ್ತಿದ್ದ, ತನ್ನ ಪೂರ್ವಜರು ಭಾರತದ ಕಲಬುರ್ಗಿಯವರು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ. ಇದನ್ನು ಬರೆದಿದ್ದು ಯಾವಾಗಲೂ ನನ್ನನ್ನು ಛೇಡಿಸುತ್ತಿದ್ದ ಜೋಯ್ ಸಿಂಗ್ ಎಂಬ ಗೆಳೆಯ. ಕಣ್ಣೀರು ಭೂಮಿ ಸೇರಿದ್ದವು. ನಾನು ಅಪಾದನೆಯಿಂದ ಮುಕ್ತನಾಗಿದ್ದೆ.

ಮರುದಿನ ಮತ್ತೆ ಅದೇ ಲೆಫ್ಟ್ ರೈಟ್, ಸೈನ್ಯದ ಪೋಷಾಕುಗಳು, ಇದರ ಜೊತೆ ಆರು ತಿಂಗಳ ಸಂಬಳಕ್ಕೆ ಅರ್ಜಿ ಹಾಕುವ ಕೆಲಸ. ಅಮ್ಮನಿಗೆ ಶುಭಾಂಕರನಿಂದ ಮತ್ತಷ್ಟು ಹಣ ಕಳುಹಿಸುವ ಕೆಲಸ ಎನ್ನುವಾಗಲೇ ಇದರ ಜೊತೆ ನನಗೊಂದು ಪತ್ರ ಪಾಕಿಸ್ತಾನದಿಂದ ಬಂದಿದೆ ಎಂಬ ಸಂದೇಶ ಶುಭಾಂಕರನಿಂದ ಬಂದಿತ್ತು ಹಾಗೂ ಅದನ್ನು ನನ್ನ ಕೈಗೆ ತಲುಪಿಸಿದವನು ಅವನೇ. ತಲುಪಿಸಿ ಹೇಳಿದ್ದ ಈಗ ತಾನೇ ಅಪರಾಧದಿಂದ ಮುಕ್ತನಾಗಿದ್ದೀಯಾ, ಇದೇನಿದು ಮೂರ್ಖ ಕೆಲಸ ಎಂದು ಪ್ರಶ್ನಿಸಿದ್ದ. ನನಗೂ ಹಾಗೇ ಅನಿಸಿತ್ತು, ಪತ್ರ ಒಡೆದು ಓದಬೇಕೆಂದು ಲಕೋಟೆ ಬಿಚ್ಚಿದೆ. ಅದು ಆಗಲೇ ಬಿಚ್ಚಿ ಮತ್ತೆ ಪ್ಯಾಕ್ ಮಾಡಲಾಗಿತ್ತು. ಪತ್ರದ ತುಂಬಾ ಬಿಳಿಯ ಪೇಂಟ್ ಎರೇಸರ್‌ನಿಂದ ಅಕ್ಷರಗಳನ್ನು ಅಳಿಸಿ ಹಾಕಲಾಗಿತ್ತು. ನನಗೆ ಓದಲು ಅಲ್ಲಿ ಏನು ಇರಲಿಲ್ಲ. ಇದು ಪಾಕಿಸ್ತಾನದ ಗಡಿ ದಾಟುವಾಗಲೇ ಅಳಿಸಿದ್ದಿರಬಹುದು ಎಂದು ಊಹಿಸಿದೆ. ಆದರೆ ಕೊನೆಯ ಸಾಲುಗಳು ಮಾತ್ರ ಅಳಿಸಲಾಗದೇ ಹಾಗೆ ಉಳಿದಿದ್ದವು. ಅವರು ಪೈಗಂಬರ್ ವಾಸಿಗಳಾದರು ಅವರ ವಫತ್ ಕಾ ದಿನ ಇಂತಹ ದಿನಾಂಕದಂದು ಮಾಡುತ್ತಾರೆ ಎಂದು ಬರೆದಿತ್ತು. ಬರೀ ದಿನಾಂಕ ಎನ್ನುವುದು ಮಾತ್ರ ಬಿಟ್ಟು ತಿಂಗಳು ದಿನ ಮತ್ತೆ ಎರೇಸರ್‌ನಿಂದ ಅಳಿಸಲಾಗಿತ್ತು. ಇದು ನನಗೆ ಅಲ್ಲಿ ಪಾಕಿಸ್ತಾನದಲ್ಲಿ ಯಾರೋ ಸತ್ತ ಬಲವಾದ ಸಂದೇಶ ಕೊಟ್ಟಿತ್ತು. ಕ್ಷಣಹೊತ್ತು ಚಾಚಾನೇ ಸತ್ತಿರಬಹುದು ಅನ್ನಿಸಿತು. ಮತ್ತೆ ಅರೆ ಕ್ಷಣದಲ್ಲಿ ಅಕ್ಕ ರಜಿಯಾ, ಪೈಗಂಬರ್ ವಾಸಿಯಾದಳೇ?

ಆ ಕೊರೆಯುವ ಚಳಿಯಲ್ಲಿ ಡೇರೆಯಿಂದ ಹೊರ ಬಂದು ನಿಂತೆ. ಹಿಮ, ಮಳೆಯಂತೆ ಸುರಿಯುತ್ತಿತ್ತು. ಪಾಕಿಸ್ತಾನದತ್ತ ಮುಖ ಮಾಡಿ ಸತ್ತವರಿಗೆ ದೇವರು ಒಳ್ಳೆಯದು ಮಾಡಲಿ ಎಂದು ಪ್ರಾರ್ಥಿಸಿದೆ. ಮತ್ತೆ ಸತ್ತವರು ಚಾಚಾನೋ ಅಥವಾ ರಜೀಯಾಳೊ ತಿಳಿಯದೇ ಗೊಂದಲಿಗನಾದೆ. ಕಣ್ಣೀರು ಕಪಾಳಕ್ಕಿಳಿದು ಇಬ್ಬರ ಬಗ್ಗೆಯೂ ಒಂದು ಪ್ರಾರ್ಥನೆ ಸಲ್ಲಿಸಿದೆ. ದೇವರು ಕಬೂಲ್ ಮಾಡಿದಂತೆ ಪೂರ್ವದಿಂದ ಒಂದು ಶಬ್ಧ ಸ್ಫೋಟಿಸಿತು. ಸಂಬಂಧಗಳು ಪಳೆಯುಳಿಕೆಗಳಾಗುವ ದುರಂತಕ್ಕೆ ಮರುಗಿದೆ. ಸೂರ್ಯ ಫಸಲ್‌ಗೆ ಹೋಗಿ ಆಕಾಶದಲ್ಲಿ ದಫನ್ ಆಗಿ ನಾಲ್ಕು ದಿನವಾಗಿತ್ತು.

●